ಪಾಂಡವಪುರ ಮತ್ತು ಮೈಶುಗರ್ ಕಾರ್ಖಾನೆಯ ಒಪ್ಪಂದದ ಬಗ್ಗೆ

1012 (1060) ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ (ಶ್ರೀರಂಗ ಪಟ್ಟಣ) : ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಮಂಡ್ಯ ಮೈಶುಗರ್ ಕಂಪನಿಗೆ ಗುತ್ತಿಗೆ ನೀಡಲಾಗಿದೆಯೇ; ಹಾಗಿದ್ದಲ್ಲಿ, ಒಪ್ಪಂದದ ವಿವರಗಳನ್ನು ಒದಗಿಸುವುದು?

ಆ) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ಮಂಡ್ಯ ಮೈಶುಗರ್ ಕಂಪನಿಯ ನಡುವೆ ಒಪ್ಪಂದ ಮಾಡಿಕೊಂಡ ಮೇಲೆ ಒದಗಿಸಲಾಗಿರುವ ಹಣದ ಮೊತ್ತವೆಷ್ಟು (ವಿವರಗಳನ್ನು ಒದಗಿಸುವುದು);

ಇ) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ಮಂಡ್ಯ ಮೈಶುಗರ್ ಕಂಪನಿಗೆ ಬಿಡುಗಡೆ ಮಾಡಿದ ಒಟ್ಟು ಅನುದಾನ ಹಾಗೂ ವೆಚ್ಚದ ವಿವರಗಳನ್ನು ಒದಗಿಸುವುದು?

ಈ) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ಮಂಡ್ಯ ಮೈಶುಗರ್ ಕಂಪನಿಯ 2008–09ನೇ ಸಾಲಿನಿಂದ ಈವರೆಗಿನ ಆಡಿಟ್ ರಿಪೋರ್ಟ್‌ನ ಅಂಕಿ–ಅಂಶಗಳ ಮಾಹಿತಿಯನ್ನು ಒದಗಿಸುವುದು?

ಉ) 2008ನೇ ಸಾಲಿನಿಂದ ಈವರೆವಿಗೂ ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ಮಂಡ್ಯ ಮೈಶುಗರ್ ಕಂಪನಿಗಳ ಲಾಭ ನಷ್ಟದ ವರ್ಷವಾರು ವಿವರಗಳನ್ನು ಒದಗಿಸುವುದು?

ಊ) ಮಂಡ್ಯ ಜಿಲ್ಲೆಯ ಕಬ್ಬು ಬೆಳೆಗಾರ ರೈತರಿಗೆ ಒದಗಿಸಲಾಗಿರುವ ಸರ್ಕಾರದ ಸೌಲಭ್ಯಗಳೇನು ಹಾಗೂ ರೈತರಿಗೆ ನೀಡಲಾಗಿರುವ ಸಬ್ಸಿಡಿ ಅನುದಾನ ವಿವರಗಳು 2008–09ನೇ ಸಾಲಿನಿಂದ ಈವರೆಗಿನ ಮಾಹಿತಿಯ ಅಂಕಿ–ಅಂಶಗಳನ್ನು ಒದಗಿಸುವುದು?

ಋ) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ಮಂಡ್ಯ ಮೈಶುಗರ್ ಕಂಪನಿಯ ಒಪ್ಪಂದದ ನಂತರ ರೈತರಿಗೆ ಆಗಿರುವ ಸಾಧಕ ಬಾಧಕಗಳನ್ನು ವರ್ಷವಾರು ಲಾಭ–ನಷ್ಟದ ಅಂಕಿ–ಅಂಶಗಳ ಸಮೇತ ಮಾಹಿತಿ ಒದಗಿಸುವುದು?

ಎ) ಮಂಡ್ಯ ಜಿಲ್ಲೆ ಕಬ್ಬು ಬೆಳೆಗಾರರ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರಗಳನ್ನು ಒದಗಿಸುವುದು)

ಶ್ರೀ ಎಸ್. ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು) :

ಅ) ಇಲ್ಲ;

ಆದರೆ, ಸರ್ಕಾರದ ಆದೇಶ ಸಂಖ್ಯೆ: ವಾಕೈ/87/ಸಸಕಾ/2008 ದಿನಾಂಕ: 31–05–2010ರನ್ವಯ, ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಮಂಡ್ಯದ ಮೈಶುಗರ್ ಸಕ್ಕರೆ ಕಂಪನಿಗೆ 3 ವರ್ಷಗಳ ಅವಧಿಗೆ ಕಾರ್ಖಾನೆಯ ಕಾರ್ಯನಿರ್ವಹಣೆಯನ್ನು (Operation & Management) ವಹಿಸಿಕೊಡಲಾಗಿದ್ದು, ಸರ್ಕಾರ, ಮೈಸೂರು ಸಕ್ಕರೆ ಕಂಪನಿ ಲಿ., ಮತ್ತು ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಗಳ ನಡುವೆ ತ್ರಿಪಕ್ಷೀಯ ಒಪ್ಪಂದ ಆಗಬೇಕಾಗಿದೆ.

ಆ)

1) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಗೆ 2010–11 ಮತ್ತು 2011–12ನೇ ಸಾಲಿನಲ್ಲಿ ಒಟ್ಟು ರೂ. 3500.00 ಲಕ್ಷಗಳ ದುಡಿಯುವ ಬಂಡವಾಳ ಸಾಲ ಒದಗಿಸಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ.

ವರ್ಷ	ಮೊಬಲಗು (ರೂ. ಲಕ್ಷಗಳಲ್ಲಿ)
2010–11	2500.00
2011–12	1000.00
ಒಟ್ಟು	3500.00

ಇದಲ್ಲದೆ, ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನಿಂದ (APEX BANK) ಪಡೆದುಕೊಂಡಿದ್ದ ಸಾಲದ ವಸೂಲಾತಿಗಾಗಿ ಸರ್ಕಾರ ನೀಡಿದ್ದ ಖಾತರಿಯನ್ನು ಅಪೆಕ್ಸ್ ಬ್ಯಾಂಕ್ ತೆರವು (Invoke) ಮಾಡಿದ್ದು, ಈ ಸಾಲ ತೀರುವಳಿಗೆ ಸರ್ಕಾರದ ಆದೇಶ ಸಂಖ್ಯೆ:ವಾಕೈ/94/ಸಸಕಾ/2008 ದಿನಾಂಕ:24–03–2011 ರಂತೆ ಕಾರ್ಖಾನೆಗೆ ರೂ. 634.36 ಲಕ್ಷ ಸಾಲ ನೀಡಿದೆ.

2) ಮೈಸೂರು ಸಕ್ಕರೆ ಕಂಪನಿಗೆ 2010–11 ಮತ್ತು 2011–12ನೇ ಸಾಲಿನಲ್ಲಿ ಒಟ್ಟು ರೂ. 5947.35 ಲಕ್ಷಗಳ ಆರ್ಥಿಕ ನೆರವನ್ನು ಒದಗಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

ವರ್ಷ	ಮೊಬಲಗು (ರೂ. ಲಕ್ಷಗಳಲ್ಲಿ)
2010–11	3956.77
2011–12	1990.58
ಒಟ್ಟು	5947.35

ಇ) ಸರ್ಕಾರದ ವತಿಯಿಂದ ಅನುದಾನವನ್ನು ಒದಗಿಸಲಾಗಿಲ್ಲ.

ಈ) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ 2006–07ನೇ ಸಾಲಿನಿಂದ ಆಡಿಟ್ ಪರಿಶೀಲನೆಯು ಬಾಕಿ ಇದೆ.

ಮೈಸೂರು ಸಕ್ಕರೆ ಕಂಪನಿಯ 2010–11ನೇ ಸಾಲಿನ ಆಡಿಟ್ ಪರಿಶೀಲನೆಯು ಬಾಕಿ ಇದೆ. 2008–09 ಮತ್ತು 2009–10ನೇ ಸಾಲಿನ ಆಡಿಟ್ ಅಂಕಿ–ಅಂಶಗಳ ವಿವರ ಕೆಳಕಂಡಂತಿರುತ್ತದೆ.

ಮೈಸೂರು ಸಕ್ಕರೆ ಕಂಪನಿ ನಿ., ಮಂಡ್ಯ

ಕ್ರ ಸಂ.	ವಿವರ	2009–10	2008–09
1	ಬಂಡವಾಳ ಮತ್ತು ಜವಾಬ್ದಾರಿಗಳು		
	1. ಷೇರು ಧನ	873.43	873.43
	2. ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು	479.56	489.05
	3. ಸಾಲಗಳು		
	ಎ. ಭದ್ರತಾ ಸಾಲಗಳು	13243.20	18725.17
	ಬಿ. ಭದ್ರತಾ ರಹಿತ ಸಾಲಗಳು	18422.02	10540.22
	ಒಟ್ಟು (ಎ+ಬಿ)	31665.22	29265.39
	ಆಸ್ತಿಗಳು		
	4. ಸ್ಥಿರಾಸ್ತಿಗಳು	1659.59	1531.17
	5. ಸಾಲಗಳು ಮತ್ತು ಮುಂಗಡಗಳು	885.82	670.67
	6. ದಾಸ್ತಾನು	2221.76	2748.59

	7. ನಗದು ಮತ್ತು ಬ್ಯಾಂಕು ಶಿಲ್ಕು	1215.81	637.98
	8. ಪ್ರಗತಿಯಲ್ಲಿರುವ ಬಂಡವಾಳ ಕೆಲಸ	10164.79	13442.90
	9. ಕ್ರೋಡೀಕೃತ ನಷ್ಟ	33932.58	26911.52

ಊ) **ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ 2008–09ನೇ** ಸಾಲಿನಿಂದ 2010–11ನೇ ಸಾಲಿನವರೆಗಿನ ವರ್ಷವಾರು ನಷ್ಟದ ವಿವರಗಳು ಕೆಳಕಂಡಂತಿದೆ.

ವರ್ಷ	ನಷ್ಟ (ರೂ. ಲಕ್ಷಗಳಲ್ಲಿ)
2008–09	548.00
2009–10	823.00
2010–11	1248.00

ಮೈಸೂರು ಸಕ್ಕರೆ ಕಂಪನಿಯ 2008–09ನೇ ಸಾಲಿನಿಂದ 2010–11ನೇ ಸಾಲಿನವರೆಗಿನ ವರ್ಷವಾರು ನಷ್ಟದ ವಿವರಗಳು ಕೆಳಕಂಡಂತಿದೆ.

ವರ್ಷ	ನಷ್ಟ (ರೂ. ಲಕ್ಷಗಳಲ್ಲಿ)
2008–09	1813.29
2009–10	4908.08
2010–11	4314.01

ಋ) ರಾಜ್ಯ ಸರ್ಕಾರವು 2008–09ನೇ ಸಾಲಿನಿಂದ ಮಂಡ್ಯ ಜಿಲ್ಲೆ ಕಬ್ಬು ಬೆಳೆಗಾರ ರೈತರಿಗೆ ಸೌಲಭ್ಯ ಹಾಗೂ ಸಬ್ಸಿಡಿ ಅನುದಾನಗಳನ್ನು ನೀಡುವ ಸಂಬಂಧ ನಿರ್ದಿಷ್ಟ ಯೋಜನೆ ಪ್ರಕಟಿಸಿರುವುದಿಲ್ಲ.

ಋ) ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಯ ನಿರ್ವಹಣೆಯನ್ನು 31.5.2010 ರಿಂದ ಮೈಸೂರು ಸಕ್ಕರೆ ಕಂಪನಿಗೆ ವಹಿಸಿ ಕೊಡಲಾಗಿದೆ. ಈ ಕಾರ್ಖಾನೆಗಳ ವ್ಯಾಪ್ತಿ ಪ್ರದೇಶದಲ್ಲಿ ರೈತರು ಬೆಳೆದ ಕಬ್ಬನ್ನು ಪೂರ್ಣವಾಗಿ ನುರಿಸಲಾಗಿರುತ್ತದೆ ಹಾಗೂ ರೈತರ ಕಬ್ಬು ಬಿಲ್ಲು ಪಾವತಿಯನ್ನು ಮಾಡಲಾಗಿರುತ್ತದೆ. 2010–11ನೇ ಸಾಲಿನಲ್ಲಿ ನುರಿಸಲಾದ ಕಬ್ಬು ಮತ್ತು ಕಬ್ಬು ಬಿಲ್ಲು ಪಾವತಿ ವಿವರಗಳು ಈ ಕೆಳಗಿನಂತಿದೆ.

ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿ.

ನುರಿಸಲಾದ ಕಬ್ಬಿನ ಪ್ರಮಾಣ (ಮೆ. ಟನ್‌ಗಳಲ್ಲಿ)	ಉತ್ಪಾದಿಸಲಾದ ಸಕ್ಕರೆ ಪ್ರಮಾಣ (ಮೆ. ಟನ್‌ಗಳಲ್ಲಿ)	ಶೇ. ಇಳುವರಿ	ಪಾವತಿಸಲಾದ ಕಬ್ಬಿನ ಬಿಲ್ಲಿನ ಮೊತ್ತ (ಲಕ್ಷ ರೂ.ಗಳಲ್ಲಿ)
334440	27638	8.37	5564.00

ಮೈಶುಗರ್ ಕಂಪನಿ, ಮಂಡ್ಯ

ನುರಿಸಲಾದ ಕಬ್ಬಿನ ಪ್ರಮಾಣ (ಮೆ. ಟನ್‌ಗಳಲ್ಲಿ)	ಉತ್ಪಾದಿಸಲಾದ ಸಕ್ಕರೆ ಪ್ರಮಾಣ (ಮೆ. ಟನ್‌ಗಳಲ್ಲಿ)	ಶೇ. ಇಳುವರಿ	ಪಾವತಿಸಲಾದ ಕಬ್ಬಿನ ಬಿಲ್ಲಿನ ಮೊತ್ತ (ಲಕ್ಷ ರೂ.ಗಳಲ್ಲಿ)
418144	36156	9.01%	6648.00

ಎ) ಮಂಡ್ಯ ಜಿಲ್ಲೆಯ ಕಬ್ಬು ಬೆಳೆಗಾರರ ಅನುಕೂಲಕ್ಕಾಗಿ ಮೈಸೂರು ಸಕ್ಕರೆ ಕಂಪನಿ ಲಿ., ಇದಕ್ಕೆ ಸರ್ಕಾರದಿಂದ ಪ್ರತಿ ವರ್ಷ ಆರ್ಥಿಕ ಸಹಾಯವನ್ನು ನೀಡುತ್ತಿದೆ. ಅಲ್ಲದೆ, ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಯನಿರ್ವಹಣೆಯನ್ನು 2010–11ನೇ ಸಾಲಿನಿಂದ ಮೈಸೂರು ಸಕ್ಕರೆ ಕಂಪನಿಗೆ ವಹಿಸಿಕೊಡಲಾಗಿದೆ. ಈ ಮೂಲಕ ಮಂಡ್ಯ ಜಿಲ್ಲೆ ಕಬ್ಬು ಬೆಳೆಗಾರ ರೈತರಿಗೆ ಅನುಕೂಲ ಮಾಡಿಕೊಡಲಾಗಿದೆ.

ಮಂಡ್ಯದಲ್ಲಿ ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲು ಸರ್ಕಾರ ಕ್ರಮವಹಿಸಿದೆ. ಈ ಸಂಸ್ಥೆಯ ಸ್ಥಾಪನೆಗಾಗಿ ಸರ್ಕಾರ 2010–11ನೇ ಸಾಲಿನಲ್ಲಿ ರೂ.100.00 ಲಕ್ಷ ಹಾಗೂ 2011–12ನೇ ಸಾಲಿನಲ್ಲಿ ರೂ.75.00 ಲಕ್ಷಗಳ ಆರ್ಥಿಕ ನೆರವನ್ನು ಒದಗಿಸಿದೆ. ಈ ಸಂಶೋಧನಾ ಕೇಂದ್ರದ ಸ್ಥಾಪನೆಯಿಂದ ಈ ಭಾಗದ ರೈತರಿಗೆ ಅನುಕೂಲವಾಗಲಿದೆ.